## ಸೊಳ್ಳೆ...

ಅನಿವಾರ್ಯ ಕಾರಣಗಳಿಂದ ಅಂದು ರಾತ್ರಿ ಒಬ್ಬಳೇ ಬೆಂಗಳೂರಿಗೆ ರೈಲು ಪ್ರಯಾಣ ಮಾಡಬೇಕಾಗಿ ಬಂತು. ನಮ್ಮ ಯಜಮಾನರು ನನ್ನನ್ನು ರೈಲು ಹತ್ತಿಸಿ ಮನೆಗೆ ಮರಳಿದರು. ರೈಲಿನ ತುಂಬಾ ಮನುಷ್ಯರಿಗಿಂತ ಹೆಚ್ಚು ಸೊಳ್ಳೆಗಳೇ ತುಂಬಿಕೊಂಡಿದ್ದವು. ಸ್ವಲ್ಪ ಹೊತ್ತಿನ ನಂತರ ಮತ್ತೆ ಫೋನ್ ಮಾಡಿ, 'ರೈಲು ಬಿಟ್ಟಿತಾ?' ಅಂತ ಕೇಳಿದರು. ನಾನು, 'ಸೊಳ್ಳೆ ಸೊಳ್ಳೆ' ಎಂದು ಕೊಂಕಣಿಯಲ್ಲಿ ಹೇಳಿದೆ. ನನ್ನ ಎದುರಿಗಿನ ಸೀಟಿನಲ್ಲಿ ಕುಳಿತಿದ್ದ ಅಜ್ಜಿಯೊಬ್ಬರು ನಾನು ಫೋನ್ ಇಡುತ್ತಿದ್ದಂತೆ, 'ಹೌದಮ್ಮ, ಸೊಳ್ಳೆ ಜಾಸ್ತಿ ಇವೆ, ಆದ್ರೂ ಇಷ್ಟು ಚಿಕ್ಕ ವಿಷಯಾನ ಯಜಮಾನರಿಗೆ ಹೇಳ್ತೀಯಾ?' ಅಂದರು. 'ರೈಲು ಸೊಳ್ಳೆ ಅಂದ್ರೆ ರೈಲು ಬಿಟ್ಟು ಅಂತ ಅರ್ಥ' ಎಂದು ಅಜ್ಜಿಗೆ ತಿಳಿಹೇಳಿದೆ!

**ಜಯಮಾಲಾ ಪೈ**



ಕಲೆ: ಗಣೇಶ ಆಚಾರ್ಯ

---

## ಓಲೆಯ ಚಿಂತೆ...

ಶಾಲೆಯಲ್ಲಿ ಪೋಷಕರ ಸಭೆ ಇತ್ತು. ಪ್ರತಿಯೊಬ್ಬ ಪೋಷಕರ ದೂರುಗಳನ್ನು ಕೇಳಿ ಹೆಡ್ ಮಿಸ್ ತಲೆ ಗರಂ ಆಗಿತ್ತು. ಕೆಲವರು ಫೀ ಕಟ್ಟದೇ ಇದ್ದರೂ,'ಇಲ್ಲ ರೀ, ನಮ್ಮನೆಯವರು ಫೀಸು ಕಟ್ಟಿದ್ದಾರೆ' ಎಂದು ಹೆಡ್‌ಮಿಸ್ ತಲೆ ತಿನ್ನುತ್ತಿದ್ದರು. ಆಗ ಅಂತವರಿಗೆಲ್ಲಾ ತರಾತುರಿಯಲ್ಲಿ ಸಾಕ್ಷಿ ತೆರೆದು ತೋರಿಸಬೇಕಿತ್ತು. ಮಧ್ಯಾಹ್ನ ಹೆಡ್‌ಮಿಸ್ ವಾಶ್‌ರೂಮಿಗೆ ಹೋಗಿ ವಾಪಸ್ಸು ತಮ್ಮ ಕ್ಯಾಬಿನ್‌ಗೆ ಹೋಗುವಾಗ ಎರಡು ಹೆಜ್ಜೆ ಮುಂದೆ ಹೋದವರು ಮತ್ತೆ ಹಿಂದೆ ಬಂದು ನನ್ನತ್ತ ತಿರುಗಿ, 'ಸ್ವಲ್ಪ ಒಳಗೆ ಬರ್ರಿ' ಅಂದರು. 'ಅಯ್ಯೊ ಮತ್ತೇನೊ ತಾಪತ್ರಯ ಕಾದಿದೆ' ಅಂದುಕೊಂಡು ಒಳಗೆ ಹೋದೆ. 'ಝುಮುಕಿ ಹೊಸದಾ? ಎಷ್ಟಾಯ್ತು?' ಅಂದರು. ನಿರಾಳತೆಯ ನಡುವೆಯೇ, '11 ಗ್ರಾಮ್ ಇದೆ ಮೇಡಂ, 76 ಸಾವಿರ ಆಯ್ತು' ಅಂದೆ. 'ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ಬೇರೆ ಚಿಂತೆ' ಅನ್ನೂ ಹಾಗೆ ನಮಗೆ ಓಲೆಯ ಚಿಂತೆ... ಇಬ್ಬರೂ ನಕ್ಕೆವು.



**ಸುವರ್ಣಾ ಮಠ**